ವಾರದ ಸಂಚಿಕೆ
Reg No. M 1299
Daily & Weekly
For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 27 ಸಂಚಿಕೆ 315] ಮಂಗಳವಾರ 15—6—1943 [3 ಪೈಸೆ

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಒರಲಿದೆ

ಫ್ರೆಂಚ್ ಜನರಿಗೆ ಎಚ್ಚರಿಕೆ !

ಸಪ್ಟೆಂಬರಲ್ಲೇ ಫ್ರೆಂಚ್, ಅಮೇರಿಕ, ಬ್ರಿಟಿಷ್ ಸೇನೆಗಳು ಫ್ರಾನ್ಸ್ ದೇಶದಲ್ಲಿ ಎಂದೂ ಕಾಣದ ಮತ್ತು ಕೇಳದಷ್ಟು ಮದ್ದುಗುಂಡುಗಳೊಡನೆ ಒಂದು ಇಳಿಯುವವು. ಏನೂ ಮಾಡಬೇಡಿ, ಸುಮ್ಮನಿರಿ, ತಾಳ್ಮೆ ತೆಗೆದುಕೊಳ್ಳಿ— ಎಂದು ಮೊರಾಕೋದಿಂದ ಅಮೇರಿಕಾದವರು ರೇಡಿಯೋನಲ್ಲಿ ಹೇಳಿದ್ದಾರೆ.

ಇಟಲಿ ನಾವಿಕರ ದಂಗೆ

ಟುನಿಷಿಯಾ ವಿಜಯದಿಂದ ಇಟಲಿ ನೌಕೆಯವರಿಗೆ ತುಂಬಾ ಆಸಮಾಧಾನವಾಗಿ ತಾವು ನೌಕೆಯನ್ನು ನಡೆಸುವುದಿಲ್ಲವೆಂದೂ, ಮಿತ್ರರಿಗೆ ಶರಣಾಗತರಾಗುವುದೊಂದೇ ಬಾಕಿಯೆಂದೂ ಗಲಭೆ ಮಾಡಿದರು. ಇದಕ್ಕಾಗಿ ಸರಕಾರದವರು ಆ ನೌಕೆಯಮೇಲೆ ಗುಂಡುಹಾರಿಸಿ ಸಧ್ಯಕ್ಕೆ ಗಲಭೆ ಕಮ್ಮಿ ಮಾಡಿದರೆಂದು, ಲಂಡನ್ ಪೀಪಲ್ಸ್ ಪತ್ರಿಕೆ ಹೇಳುತ್ತದೆ.

ಕೆಟ್ಟ ತಂತಿ ಮಾರಿದ್ದಕ್ಕೆ ಶಿಕ್ಷೆ

ಹದ ತಪ್ಪಿ ಕೆಟ್ಟ ತಂತಿಗಳನ್ನು ಅಮೇರಿಕ ಕಾರ್ಖಾನೆಯವರು ಸರಕಾರಕ್ಕೆ ಮಾರಿದ್ದರಿಂದ 5 ಕಂಪೆನಿಗಳಿಗೆ 10 ಸಾವಿರ ಡಾಲರ್ ದಂಡ ವಿಧಿಸಿದರು. ಇದರಲ್ಲಿ ಬಹು ಭಾಗ ರಷ್ಯಾಕ್ಕೆ ಸೇರಿದೆ.

ಖೈದಿಗಳ ಬಿಡುಗಡೆ

ಮುಂಬೈನಲ್ಲಿ 45 ಮಂದಿಗಿಂತ ಹೆಚ್ಚಾಗಿ ಕಾಂಗ್ರೆಸ್ ರಾಜಕೀಯ ಖೈದಿಗಳು ಬಿಡುಗಡೆಯಾಗಿರುವರು.

ಜಪಾನರ ಧಾಳಿಯೆ ?

ಜಪಾನೀಯರು ಮಂಗೋಲಿಯಾದಿಂದ ಚುಂಕಿಂಗೆ ನುಗ್ಗಬಹುದೆಂದು ಅಮೆರಿಕ ಪತ್ರಿಕೆಗಳು ಹೇಳುವವು.

ಚೀನೀಯರ ವಿಜಯ

ಚೀನೀಯರು ಸುಂಗ್ಮೀಜನ್ನು ಹಿಡಿದುಕೊಂಡರು. ಜಪಾನೀಯರು ದಿಕ್ಕಾಪಾಲಾಗಿ ಓಡುತ್ತಿರುವರು.

ಅಮೇರಿಕಾ ಶಕ್ತಿ

ಈಗ 18 ತಿಂಗಳಲ್ಲಿ ಅಮೇರಿಕಾವು 2 ಮಿಲಿಯ ಭೂ ಸೈನ್ಯವನ್ನು ಕಳಿಸಿದೆ, ಈ ಸೈನ್ಯಗಳು ಪ್ರಪಂಚದ ನಾನಾ ಭಾಗದ ರಣರಂಗದಲ್ಲಿರುವವು. ಪೈಲಾನಿಕರು 3 ಮಿಲಿಯಕ್ಕೆ ಕಮ್ಮಿಯಿಲ್ಲದೆ ಪ್ರತಿ ದಿವಸವೂ 90 ಸಾವಿರ ಮೈಲಿ ಆಂತರಿಕ್ಷದಲ್ಲಿ ಪ್ರಯಾಣ ಮಾಡುವರು.

ಜಪಾನಿನಲ್ಲಿ ಭೂಕಂಪ

ಮೊನ್ನೆ ಭಾನುವಾರ ಜಪಾನಿನಲ್ಲಿ ಎರಡಾವರ್ತಿ ಭೂಕಂಪವಾಯಿತು, ನಷ್ಟವಿಷ್ಟೆಂದು ಇನ್ನೂ ಪ್ರಕಟವಾಗಿಲ್ಲ.

ಸ್ಟಾಂಪು ಕಳ್ಳರು

ಕರಾಚಿಯಲ್ಲಿ ಪೋಲೀಸಿನವರು ಕೆಲವು ಅಂಚೆ ಜವಾನರನ್ನೂ ಒಬ್ಬ ಬ್ಯಾಂಕರು ಗುಮಾಸ್ತೆಯನ್ನೂ ಇತರರು ಕೆಲವರನ್ನೂ ದಸ್ತಗಿ ಮಾಡಿದರು. ಇವರುಗಳು ಏರ್‌ಮೇಲ್, ವಿದೇಶೀ ಟಪಾಲುಗಳಲ್ಲಿ ಬಳಸುವ ದೈ ಒಕ್ಕದ್ದಾದ ಸ್ಟಾಂಪುಗಳನ್ನು ಸೇರಿಸುತ್ತಲೂ ಮಾರುತ್ತಲೂ ಇದ್ದರಂತೆ. ಇವಂ ಮನೆಗಳನ್ನು ಶೋಧಿಸಿ ನೋಡಲು ನೂರಾರು ರೂಪಾಯಿಗಳ ಮುದ್ರೆ ಒತ್ತದ ಸ್ಟಾಂಪುಗಳು ಸಿಕ್ಕಿರುತ್ತವಂತೆ.

o o

ಹಾಯಿಂಟ್ ಹೆಚ್ಚಿತು

ಬೆಂಗಳೂರಿನಲ್ಲಿ ಜೀವನದ ಅಂಕಿ ಅಂಶಗಳು ಏಪ್ರಿಲ್‌ಗಿಂತ 7.2 ಪಾಯಿಂಟ್ ಹೆಚ್ಚಿದೆ, ಅಂದರೆ 181.8 ಪಾಯಿಂಟುಗಳು.

o o

ಹೊಸ ಕಂಪೆನಿಗೆ ನಿರ್ಬಂಧ

ಹೈದರಾಬಾದು ಸಂಸ್ಥಾನದಲ್ಲಿ ಹೊಸದಾಗಿ ಯಾವ ಹೊಸ ಕಂಪೆನಿಗಳನ್ನೂ ಸರ್ಕಾರಿ ಅಪ್ಪಣೆಯಿಲ್ಲದೆ ಸ್ಥಾಪಿಸಕೂಡದು.

ಮಲಬಾರಿನಲ್ಲಿ ಹೊಟ್ಟೆಗಿಲ್ಲ

ಮಲಬಾರಿನಲ್ಲಿ ಆಹಾರ ಪದಾರ್ಥಗಳು ಸಿಗದೆ ಹೇಳಲಾರದಷ್ಟು ಕಷ್ಟವಾಗಿದೆ. ಎರ್ನಾಡು ತಾಲ್ಲೂಕಿನಲ್ಲಿ ಜನರ ಕಷ್ಟ ಕಣ್ಣಿನಿಂದ ನೋಡಲಾಗುವುದಿಲ್ಲ. ಆ ಜನರು ಎಲೆಗಳನ್ನೂ ಹುಲ್ಲನ್ನೂ ತಿಂದು ಜೀವಿಸುತ್ತಿದ್ದಾರೆ. ಕೊಡಗಿನಿಂದ ಭತ್ತವನ್ನು ಅಲ್ಲಿಗೆ ಕಳಿಸುವ ಏರ್ಪಾಡಾಗಿದೆ.

o o

ಯುಗೋಸ್ಲೋವಿಯ ಸಿದ್ಧ

ನಮಗೆ ಸೂಚನೆ ಕೊಡುವುದೇ ತಡ ನಾವು ಗೋರಿಲ್ಲಾ ಯುದ್ಧಕ್ಕೆ ಸಿದ್ಧವಾಗಿರುತ್ತೇವೆ ಎಂದು ಯುಗೋಸ್ಲೋವೇಕಿಯಾದವರು ಹೇಳಿ, ತಾವು 24 ಗಂಟೆಗಳೊಳಗಾಗಿ 25 ಸಾವಿರ ಮಂದಿಯನ್ನು ಸೇರಿಸಬೆಮೆಂದು ಹೇಳಿರುವರು.

o o

ರೇಷನಿಂಗ್

ಕೊಲ್ಲೇಗಾಲದಲ್ಲಿ ಅಕ್ಕಿ, ರಾಗಿ, ಸಕ್ಕರೆ, ಸೀಮೆಯೆಣ್ಣೆ ಇವಕ್ಕೆಲ್ಲಾ ರೇಷನಿಂಗಾಗಿದೆ.

New Opera Talkies — Aryamala
ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ
ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು
ಆರ್ಯಮಾಲಾ
ಪೆರಾ
ತಮಿಳು ಚಿತ್ರ
5th Week
ನೇ ವಾರ
Ranjit — — Satyabhama
ರಣಜಿತ್ ಟಾಕೀಸ್
ವೈ. ವಿ. ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ
2nd Week
ಸತ್ಯಭಾಮಾ
[ತೆಲಗು]

ಮುಂದೆ ಎತ್ತಕಡೆ ಹಿಟ್ಲರಿನ ದಂಡೆಯಾತ್ರೆ!

ಹಿಟ್ಲರಿನ ಯೋಜನೆ ಇನ್ನು ಮುಂದೆ ಏನು ಮಾಡಬೇಕೆಂದಿರುವುದು? ಪಿರಿನೀಸ್ ಪರ್ವತದಲ್ಲಿ ಅಂಡೋರಾ ಎಂಬ ಪುಟ್ಟ ಸಂಸ್ಥಾನವಿದೆ. ಇದರ ಜನಸಂಖ್ಯೆ 5500, ವಿಸ್ತೀರ್ಣ 175 ಮೈಲಿಗಳು. ಇದು ಸ್ವತಂತ್ರ ರಾಜ್ಯ. ಫ್ರಾನ್ಸ್ ಮತ್ತು ಸ್ಪೇನು ಗಡಿಯಲ್ಲಿವೆ. ವ್ಯವಸಾಯದಿಂದ ಈ ಜನರು ಜೀವಿಸುವುದು. ರೈಲ್ವೆ ಬಾಲ್ಡಿ ಹೊಗೆಸೊಪ್ಪು ಬೆಳೆಯುವರು. ದ್ರಾಕ್ಷಿಯಿಂದ ಹೆಂಡವನ್ನು ತಯಾರ್ಮಾಡುವರು ಅಲ್ಲದೆ ಬಗೆಬಗೆಯ ಲೋಹದ ಗಣಿಗಳಿರುವುವು. ಜನರಿಗೆ ಕೆಲಸಕ್ಕೆ ಬರುವವರಲ್ಲಿ ಪ್ರೇಮ ಹೆಚ್ಚು. ಜನರು ಕಾಟಲಂ ಭಾಷೆಯನ್ನು ಮಾತನಾಡುವರು. ವಿದ್ಯಾಭ್ಯಾಸ ಬಲು ಕಮ್ಮಿ. ಫ್ರೆಂಚ್ ಸ್ಪೇನ್ ನಾಣ್ಯಗಳು ಚಲಾವಣೆಯಲ್ಲಿದೆ ದೇಶವನ್ನು ಫ್ರಾನ್ಸ್ ಮತ್ತು ಉರಗೆಲ್ ಬಿಷಪ್ ನವರು ನೋಡಿಕೊಳ್ಳುವರು ಸರ್ಕಾರವು ಜನರಾಯಿತರಾದ 24 ಸದಸ್ಯರಿಂದ ನಡೆಯುವುದು. ಪ್ರತಿ ನಾಲ್ಕು ವರ್ಷಕ್ಕೆ ಒಂದು ಸಲ ಚುನಾವಣೆ ಈ ಪುಟ್ಟ ಸ್ವತಂತ್ರ ರಾಜ್ಯವು ಯಾವುದಕ್ಕೂ ಸೇರದೆ ತಾನೇ ತಾನಾಗಿರುವುದು, ಸಮುದ್ರ ತೀರದ ಹತ್ತಿರವಿದೆ. ಫ್ರಾನ್ಸಿಗಾಗಲೀ ಸ್ಪೇನಿಗಾಗಲೀ ಸರಾಗವಾಗಿ ಒಡಾಡಲು ರಸ್ತೆಗಳಿಲ್ಲ. ಈ ರಾಜ್ಯದಿಂದ ನಾಜಿಗಳಿಗೆ ಸಿದ್ಧಿಯಿಲ್ಲ. ಫ್ರಾನ್ಸಿನಿಂದ ಅನೇಕರು ಇಲ್ಲಿಗೆ ತಪ್ಪಿಸಿಕೊಂಡು ಹೋಗುತ್ತಿರುವುದು ಈಗ ನಾಜಿಗಳಿಗೆ ತಿಳಿಯಿತು. ಇವರು ಯುದ್ಧದಲ್ಲಿ ಯಾರ ಸಂಗಡವೂ ಸೇರಲ್ಲ. ಅಲ್ಲದೆ ಸ್ವತಂತ್ರ ರಾಜ್ಯ. ಹಿಟ್ಲರಿನ ಬೇಳೆ ಇಲ್ಲಿ ಬೆಯ್ಯುವುದಿಲ್ಲ. ಜರ್ಮನಿಯಲ್ಲಿದ್ದ 300 ಮಂದಿ ಕೋಟ್ಯಾಧೀಶ್ವರರು ಇಲ್ಲಿಗೆ ಬಂದು ಸೇರಿರುವರು. ಇವರಲ್ಲಿ ಬ್ರಿಟಿಷರೂ ಅಮೇರಿಕಾದವರೂ ಇರುತ್ತಾರೆ. ಜನರು ಬಡವರಾದರೂ ಧೈರ್ಯವಂತರು. ವ್ಯಾಪಾರ ಮಾಡುವುದು, ಕುರಿ ಸಾಕುವುದು ಇಷ್ಟಾದರೂ ಇವರ ಹೊಟ್ಟೆ ತುಂಬುವುದಿಲ್ಲ. ಹಿಂದೆ ಇವರು ಹೊಗೇ ಸೊಪ್ಪು ಒಡವೆ ಇವೆಲ್ಲಾ ಹಾರಿಸಿಕೊಂಡು ಬರುತ್ತಿದ್ದರು. ಈಗ ಹಿಟ್ಲರಿನ ಶತ್ರುಗಳಾದ ಫ್ರಾನ್ಸಿನ ಹೆಂಗಸರೂ ಗಂಡಸರುಗಳಿಗೆ ಆಶ್ರಯ ಕೊಡುತ್ತಿದ್ದಾರೆ. ಹೀಗೆ ಮಾಡುವುದರಿಂದ ಇವರಿಗೆ ಈಗ ಜೀವನವು ಸುಲಭವಾಗಿ ಜರುಗುತ್ತಿದೆ. ಇದನ್ನು ನೋಡಿ ಹಿಟ್ಲರು ಕೈ ಹಿಸಿಗಿಕೊಳ್ಳುತ್ತಿರುವಂತೆ ಮಾಡಿದೆ. ಇವರನ್ನು ಹಿಡಿಯಲು ಹಿಟ್ಲರಿಗೆ ಸಾಧ್ಯವೇ? ಈ ಪಿರಿನೀಸ್ ಬೆಟ್ಟದಲ್ಲಿ ಇವರನ್ನು ಹಿಡಿಯುವ ಕೆಲಸ ಯಾರಿಂದಲೂ ಆಗುವುದಿಲ್ಲ. ಈ ಅಂಡೋರ ಜನರಿಗೆ ಆ ದೇಶದ ದಾರಿ ಗೊತ್ತು, ಅವರೇ ಆಶ್ರಿತರನ್ನು ಸಮುದ್ರದ ಕಡೆ ಕರೆದುಕೊಂಡು ಹೋಗಬೇಕು. ಅಲ್ಲಿಂದ ಅವರು ಹಡಗಿನಲ್ಲಿ ಪಾರಾಗುವರು. ಇದನ್ನು ನೋಡಿ ಈ ರಾಜ್ಯವನ್ನು ಮುತ್ತುವ ಯೋಜನೆ ಹಿಟ್ಲರ್ ವೈದಳನಲ್ಲಿ ಸೇರಿದೆ. ಮುಂದೆ ನೋಡಬೇಕು!

For good printing.
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಅಮೇರಿಕಾದ ಹುಚ್ಚು

ಅಮೇರಿಕವು ವಿಚಿತ್ರ ದೇಶ. ಫ್ಯಾಷನ್ನಿನ ಹುಚ್ಚು ವ್ಯಾಪಿಸಿನ ನಂತರ ಅಮೇರಿಕಾದಲ್ಲಿ ವಿಶೇಷವೆನ್ನಬಹುದು. ಸಿನಿಮಾ ನಟಿಯರ ಫ್ಯಾಷನ್ನನ್ನು ಅನುಸರಿಸುವುದರಲ್ಲಿ ಬಹುಶಃ ಅಮೆರಿಕಾಕ್ಕೇ ಪ್ರಥಮ ಸ್ಥಾನ. ಓರ್ವ ಸಿನಿಮಾ ನಟಿಯು ಕೂದಲಿನ ಫ್ಯಾಷನ್ನಿಂದ ಅಮೇರಿಕಾದ ಯುದ್ಧ ಕೈಗಾರಿಕೆಗೇ ಹೇಗೆ ಸೇರಾಗಿ ತಡೆಯುಂಟಾಯಿತು ಎಂಬ ವಿನೋದಕರ (ವಿಷಾದಕರವೂ ಆಹುದು) ಸುದ್ದಿಯೊಂದು ಬಂದಿದೆ. ವೆರೋನಿಕಾ ಲೇಕ್ ಎಂಬ ಸಿನಿಮಾ ನಟಿಯು ಉದ್ದ ಕೂದಲನ್ನು ಬೆಳೆಸಿದ್ದಾಳೆ. ಇದನ್ನು ನೋಡಿ ಅಮೇರಿಕಾದ ಹುಡುಗಿಯರು 'ಬೊಬ್ ಕಟ್' ಸದ್ಧತಿಬಿಟ್ಟು, ಉದ್ದ ಕೂದಲಿಗೆ ತೊಡಗಿದರು. ಯುದ್ಧ ಕೈಗಾರಿಕೆಗಳಲ್ಲಿ ಸಾವಿರಾರು ಹುಡುಗಿಯರು ಸೇವಾಕಾರ್ಯ ಹೊಂದಿದವರುಂಟು. ಇವರೂ ಉದ್ದ ಕೂದಲನ್ನು ಬೆಳೆಸಿದರು. ಕೆಲಸದಲ್ಲಿ ತೊಡದಿದ್ದಾಗ ಅನೇಕರ ಕೂದಲು ಗಾಳಿಗೆ ಹಾರಿ ಯಂತ್ರದಲ್ಲಿ ಸಿಲುಕಿ, ತಲೆಯ ತೊಗಟೆಯೇ ಹಾರಿ ಹೋಯಿತು, ಪ್ರಾಣಕ್ಕೂ ಅಪಾಯ, ಇಂತಹ ಅವಘಡಗಳಾದರೆ ಕಾರ್ಖಾನೆಯಲ್ಲಿಯೂ ಗೊಂದಲ. ಯುದ್ಧ ಕೈಗಾರಿಕೆಗೆ ಇದು ದೊಡ್ಡ ಆತಂಕವಾಯಿತು. ವಿಚಾರ ಮಾಡಿ ನೋಡಿದಾಗ ವೆರೋನಿಕಾ ಲೇಕ್ ಮಾರಾಣಿಯು ವರದಾನವೆಂದು ಗೊತ್ತಾಯಿತು. ವೆರೊನಿಕಾ ಉದ್ದ ಕೂದಲಿಟ್ಟುಕೊಳ್ಳುವವರೆಗೆ ಇತರ ಹುಡುಗಿಯರು ತಮ್ಮ ಕೂದಲನ್ನು ತೆಗೆಯುವುದಿಲ್ಲ. ಸರಕಾರವು ವೆರೊನಿಕಾ ಲೇಕಳನ್ನು ವಿನಂತಿಸಿಕೊಳ್ಳಬೇಕಾಯಿತು. 'ದೇಶದ ಹೆಸರಲ್ಲಿ' ವೆರೋನಿಕಾ ಕೂದಲು ಕತ್ತರಿಸಿದಳು. ಕೂಡಲೇ ಇತರ ಹುಡುಗಿಯರೂ ಕೂದಲಿಗೆ ಕತ್ತರಿಯಿಟ್ಟರು. ಸುಧಾರಿತ ದೇಶಗಳಲ್ಲಿನ ಕುರಿನುಂದಿಗಳಿವು! (ಕೊ)

ಜರ್ಮನರ ದಿಗಿಲು

ಮಿತ್ರರ ವಿಜಯದಿಂದ ಜರ್ಮನರು ತಾವು ಆಕ್ರಮಿಸಿರುವ ರಾಜ್ಯಗಳಲ್ಲಿನ ಜನರು ದಂಗೆ ಎದ್ದಾರೆಂದು ದಿಗಿಲು ಬಿದ್ದಿರುವರು.

ಜರ್ಮನರು ನಾರ್ವೆ ಸ್ವೀಡನ್ ಗಡಿ ಭದ್ರವಾಗಿ ಕಾಯುತ್ತಿರುವರು,

ಂ ಂ

ಬಾಂಧವ್ಯಕ್ಕೆ ಧಕ್ಕೆ

ನಾಜಿಗಳ ಜೇಡಿಕೆಗೆ ಮಣ್ಣೆ ಫಿನಿಷ್ ಸರಕಾರವು ಮನ್ನಣೆ ಕೊಡುತ್ತಿರುವುದರಿಂದ ಅಮೇರಿಕಾ ಫಿನ್‌ಲೆಂಡಿನ ಬಾಂಧವ್ಯವು ಜೀನ್ನಾಗಿಲ್ಲವೆಂದು ತೋರುವುದು.

ಂ ಂ

ಇಂಡೂರು ಮಹಾರಾಜರು

ಇಂಡೂರು ಮಹಾರಾಜರು ತಮ್ಮ ಅಮೇರಿಕ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ಮತ್ತು 9 ವರ್ಷ ವಯಸ್ಸಾಗಿರುವ ಹೆಣ್ಣು ಮಗುವನ್ನು ಅದರ ತಾಯಿಯ ಬಳಿ ಬಿಡುವುದಾಗಿಯೂ, ರಾಣಿಯು ಸ್ವಲ್ಪ ಐಶ್ವರ್ಯದಿಂದ ತೃಪ್ತಳಾಗುವಳೆಂದೂ, ರಾಜರೂ ವಿವಾಹವಿಚ್ಛೇದನ ಮಾಡುವುದಿಲ್ಲವೆಂದೂ ಹೇಳಲಾಗಿದೆ.

ಅಕ್ಕರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮಂಗಡಿಕೆಗಳು ಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ತಿರುಪತಿ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವುದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ